ಆರಿಸಿ ತರುತ್ತೇನೆ. ಕೃತಿಯನ್ನು ಪೂರ್ತಿಯಾಗಿ ಓದಿದ ನಂತರ, ಕೃತಿಯ ವಸ್ತು ಇಷ್ಟವಾದರೆ ಅದನ್ನು ಮತ್ತೊಮ್ಮೆ ಓದುತ್ತೇನೆ. ಅಷ್ಟೇ ಅಲ್ಲ, ಅದು ಕನ್ನಡ ಸಾಹಿತ್ಯಕ್ಕೆ ಅನಿವಾರ್ಯವೇ ಎಂದು ಯೋಚಿಸಿ, ವಸ್ತುವಿನಲ್ಲಿ ಹೊಸತನವಿದ್ದರೆ ಅದನ್ನು ಅನುವಾದಕ್ಕೆ ಕೈಗೆತ್ತಿಕೊಳ್ಳುತ್ತೇನೆ. ನಡುವೆ ಪ್ರಕಾಶಕರು ಅಥವಾ ಲೇಖಕರಿಗೆ ಅನುಮತಿ ಕೋರಿ ಪತ್ರ ಬರೆಯುತ್ತೇನೆ. ಲೇಖಕರು ದಿವಂಗತರಾಗಿದ್ದಾಗ ಅವರ ವಾರಸುದಾರರಿಂದ ಅನುಮತಿ ಕೋರುತ್ತೇನೆ. ಆದರೆ ಬಹುತೇಕ ವಾರಸುದಾರರು ಹಣದ ಬೇಡಿಕೆಯನ್ನು ಮುಂದಿಡುತ್ತಾರೆ. ಅವರು ಕೇಳುವ ಹಣ ಕೆಲವೊಮ್ಮೆ ನನ್ನ ಸಾಮರ್ಥ್ಯಕ್ಕೆ ಮೀರಿದ್ದಾಗಿರುತ್ತದೆ. ಕೆಲವರಿಗಂತೂ ಅವರ ತಂದೆ ತಾಯಿಯರು ಬರೆದ ಕೃತಿಯನ್ನು ಅನುವಾದಿಸಿ ಅನುವಾದಕ ಹಣ ಸಂಪಾದಿಸುತ್ತಾನೆ ಎಂಬ ಭಾವನೆ ಇದೆ. ಅಂತಹ ಸಂದರ್ಭದಲ್ಲಿ ಆ ಪುಸ್ತಕವನ್ನೇ ಕೈ ಬಿಡಬೇಕಾಗುತ್ತದೆ. ಸಾಮಾನ್ಯವಾಗಿ ಅನುವಾದಕ್ಕೆ ಸಿಗುವ ಸಂಭಾವನೆಯಲ್ಲಿ ಅರ್ಧದಷ್ಟು ಮೂಲ ಲೇಖಕರಿಗೆ ಕೊಡುವ ಪರಿಪಾಠವನ್ನು ಅನುವಾದಕರು ಅನುಸರಿಸುತ್ತಾರೆ. ಕಮಲಾದಾಸ್ ಅವರು ಕನ್ನಡದಲ್ಲಿ ಬಹಳ ಬೇಡಿಕೆ ಇರುವ ಲೇಖಕಿಯಾದ್ದರಿಂದ ಅವರು ಬರೆದ 243 ಕಥೆಗಳಲ್ಲಿ 235 ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದು, ಅವುಗಳನ್ನು ವಿವಿಧ ಪ್ರಕಾಶಕರು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಆದರೆ ಅವರ ನಿಧನದ ನಂತರ ಅನುಮತಿ ಪಡೆಯಲು ತುಂಬಾ ಹೆಣಗಬೇಕಾಯಿತು. ವೈಕಂ ಮಹಮ್ಮದ್ ಬಷೀರ್ ಅವರ ಕಥೆಗಳು ಅನುವಾದಕ್ಕೆ ಸುಲಭವಾಗಿ ದಕ್ಕುವುದಿಲ್ಲ. ಅವರು ಬಳಸುವ ಭಾಷೆ, ಶೈಲಿ, ವಿಭಿನ್ನವಾಗಿರುತ್ತದೆ. 'ಜನ್ಮದಿನ' ಎಂಬ ಅವರ ಕಥೆಯನ್ನು ನಾನು ಕನ್ನಡಕ್ಕೆ ಅನುವಾದಿಸುವಾಗ ಐದು ಸಲ ತಿದ್ದಿ ಬರೆದರೂ ಮೂಲದ ಸೊಗಡು ಬಂದ ಸಂತೃಪ್ತಿ ದೊರೆಯಲಿಲ್ಲ. ಅದು 'ಮಯೂರ'ದಲ್ಲಿ ಪ್ರಕಟವಾದಾಗ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅನೇಕರು ಫೋನ್ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಅದೇ ಕಥೆ ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ. ತರಗತಿಯ ಪಠ್ಯಕ್ಕೆ ಆಯ್ಕೆಯಾಗಿತ್ತು.

ನಾನು ಕೃತಿಗಳ ಆಯ್ಕೆ ಸಂದರ್ಭದಲ್ಲಿ ಸಾಕಷ್ಟು ಎಚ್ಚರ ವಹಿಸುತ್ತಿದ್ದೇನೆ. ಕೇರಳದ ಸಂಸ್ಕೃತಿ, ಭಾಷೆ, ಶೈಲಿಯನ್ನು ಕನ್ನಡಕ್ಕೆ ತರುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದ್ದೇನೆ ಎಂದು ಹೇಳಲಾರೆ. ಆದರೆ ಆ ನಿಟ್ಟಿನಲ್ಲಿ ನನ್ನ ಪ್ರಯತ್ನ ನಿರಂತರ ಸಾಗಿದೆ.

**◆ ಅನುವಾದದಲ್ಲಿ ತೊಡಗಿಸಿಕೊಳ್ಳಬೇಕು ಎಂದು ನಿಮಗೆ ಅನಿಸಿದ್ದು ಯಾವಾಗ? ಏಕೆ?**

1974ರಲ್ಲಿ ನಾನು ತುಮಕೂರಿನಿಂದ ಮೈಸೂರಿಗೆ ವರ್ಗವಾಗಿ ಬಂದೆ. ಅಲ್ಲಿ ನನ್ನ ಸಹೋದ್ಯೋಗಿ ಬಿ. ಗಂಗಾಧರ ಮೂರ್ತಿ, ಅವರ ಗೆಳೆಯ ಎಸ್. ನಾರಾಯಣ ಮುಂತಾದವರು ಮಾರ್ಕ್ಸ್‌ವಾದವನ್ನು ಬಿಂಬಿಸುವ 'ಒಡನಾಡಿ' ಎಂಬ ಮಾಸಪತ್ರಿಕೆಯನ್ನು ಸಂಪಾದಿಸುತ್ತಿದ್ದರು. ಇ.ಎಂ.ಎಸ್. ನಂಬೂದರಿಪಾದ್ ಅವರ ಲೇಖನಗಳನ್ನು ಅನುವಾದಿಸಿಕೊಡುವಂತೆ ಈ ಪತ್ರಿಕೆಯ ಮುಖ್ಯಸ್ಥರು ಕೇಳಿಕೊಂಡಾಗ ಹಿಂಜರಿಕೆಯಿಂದಲೇ ಒಪ್ಪಿಕೊಂಡೆ. ಭಾನುವಾರ ಎಸ್. ನಾರಾಯಣ ಅವರ ಮನೆಯಲ್ಲಿ ಕುಳಿತುಕೊಂಡು, ಬಿ. ಗಂಗಾಧರ ಮೂರ್ತಿ, ಸಿರಿಮನೆ ನಾಗರಾಜ್, ಶಿವಾನಂದ ಸಾಸ್ವೆಹಳ್ಳಿ ಮತ್ತು ನಾನು ಸೇರಿ ಅನುವಾದವನ್ನು ರಿಪೇರಿ ಮಾಡುತ್ತಿದ್ದೆವು. ಈ ಲೇಖನಗಳ ಅನುವಾದವನ್ನು ಮೆಚ್ಚಿ ಮೈಸೂರಿನ ಕೆಲವು ಸಾಹಿತಿ ಮಿತ್ರರು ನೇರವಾಗಿ ನಾನು ಕೆಲಸ ಮಾಡುವ ಆಫೀಸಿಗೆ ಬಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಅಂದಿನಿಂದ ನನಗೆ ಅನುವಾದದ ಹುಚ್ಚು ಅಂಟಿಕೊಂಡಿತು. 1978ರ ತನಕ ನಾನು 'ಒಡನಾಡಿ' ಪತ್ರಿಕೆಗೆ ಅನುವಾದ ಮಾಡಿಕೊಡುತ್ತಿದ್ದೆ. 1979ರಲ್ಲಿ ನನಗೆ ಬೆಂಗಳೂರಿಗೆ ವರ್ಗವಾಯಿತು. 1983ರಲ್ಲಿ ಡಾ. ಪುನತ್ತಿಲ್ ಕುಞಬ್ದುಲ್ಲ ಎಂಬುವರ 'ಪಾಂಚಾಲಿಯ ಪ್ರಪಂಚ' ಎಂಬ ಕಥೆಯನ್ನು ಅನುವಾದಿಸಿ 'ಮಲ್ಲಿಗೆ' ಮಾಸಪತ್ರಿಕೆಗೆ ಕಳುಹಿಸಿದೆ. ಅದು ನಾನು ಅನುವಾದಿಸಿದ ಮೊದಲ ಕಥೆ. ಅದಕ್ಕೆ ಮೂವತ್ತು ರೂಪಾಯಿಗಳ ಸಂಭಾವನೆ ಬಂದಾಗ ನನ್ನ ಸಂತೋಷ ಅಷ್ಟಿಷ್ಟಾಗಿರಲಿಲ್ಲ. ಅದರ ನಂತರ ನನ್ನ ಅನುವಾದ ಪ್ರವೃತ್ತಿ ಕಥೆ ಕಾದಂಬರಿಗಳತ್ತ ಹೊರಳಿತು. 2009ರಲ್ಲಿ ನಾನು ನಿವೃತ್ತನಾದ ಸಂದರ್ಭದಲ್ಲಿ ಬೆಂಗಳೂರಿನ ಕಲಾಗ್ರಾಮದಲ್ಲಿ 'ಕುವೆಂಪು ಭಾಷಾಭಾರತಿ ಪ್ರಾಧಿಕಾರ' (ಅನುವಾದ ಅಕಾಡೆಮಿ)